**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ**

**O.S.** ನಂ. 64/2019 **CW – 1**

**ದಿನಾಂಕಃ–21.07.2026. ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಸಣ್ಣಜವರಯ್ಯ |
| ತಂದೆಯ ಹೆಸರು | : | ದೊಡ್ಡಉಳ್ಳಯ್ಯ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಭೂಮಾಪಕರು |
| ವಾಸ ಸ್ಥಳ | : | ವಿರಾಜಪೇಟೆ |

**ಮುಖ್ಯ ವಿಚಾರಣೆ ಃ –** ಇವರು Court commissioner ಆಗಿದ್ದು ದಾಖಲೆಗಳ ಜೊತೆ ವರದಿ ಸಲ್ಲಿಸಿದ್ದು , ಆ ದಾಖಲೆಗಳು ಮತ್ತು ವರದಿ ನ್ಯಾಯಾಲಯದ ದಾಖಲೆಗಳಾಗಿದ್ದು, ಆದ್ದರಿಂದ ಅವುಗಳನ್ನು ಪ್ರತ್ಯೇಕವಾಗಿ ನಿಶಾನೆಗೊಳಿಸಿರುವುದಿಲ್ಲ.

**ಪಾಟೀ ಸವಾಲುಃ ವಾದಿ ಪರ ಶ್ರೀ. ಕೆ. ಪಿ. ಬಿ. ವಕೀಲರಿಂದಃ**

ಸಾಕ್ಷಿಗೆ ವರದಿಯಲ್ಲಿ ಸಲ್ಲಿಸಿದ ನಕ್ಷೆಯನ್ನು ತೋರಿಸಿದ್ದು, ಇದನ್ನು ನಾನು ಸ್ಥಳಕ್ಕೆ ಹೋಗಿ ಪರಿಶೀಲಿಸಿ ತಯಾರಿಸಿದ ದಾಖಲೆ ಎಂದರೆ ಸರಿ. ಸಾಕ್ಷಿಗೆ ವರದಿ ಜೊತೆ ಸಲ್ಲಿಸಿದ ನಕ್ಷೆಯ ಕೊನೆಯಲ್ಲಿ 6 ನೇ ಪಾಯಿಂಟ್ ಅನ್ನು ಓದಿ ಹೇಳಿದ್ದು, ಅದರಂತೆ ಈಗ ತೋಡು ಸರ್ವೆ ನಂ. 184/2 ರಲ್ಲಿ ವಾದಿಗೆ ಸೇರಿದ ಜಾಗದಲ್ಲಿ ಹರಿಯುತ್ತಿದೆ ಎಂದರೆ ಸರಿ. ಈಗ ಈ ತೋಡಿನ ಬದಲಾವಣೆ ಗ್ರಾಮ ನಕಾಶೆಯಲ್ಲಿ ನಮೂದಿಲ್ಲ ಎಂದರೆ ಸರಿ. ಗ್ರಾಮನಕ್ಷೆಯಲ್ಲಿ ಸದರಿ ತೋಡು ಪ್ರತಿವಾದಿಯವರ ಸರ್ವೆ ನಂ. ಆಸ್ತಿ 152/5 ರ ಪಕ್ಕದಲ್ಲಿ ದಕ್ಷಿಣದ ಕಡೆ ತೋರಿಸಲಾಗಿದೆ ಎಂದರೆ ಸರಿ, ಆದರೆ ಈಗ ಅಲ್ಲಿ ತೋಡು ಹರಿಯುತ್ತಿಲ್ಲ. ತೋಡಿನ ಜಾಗದಲ್ಲಿ ಈಗ ಪ್ರತಿವಾದಿಯ ಗದ್ದೆ ಇದೆ ಎಂದರೆ ಸರಿ. ನಕಾಶೆಯಲ್ಲಿ ತೋರಿಸಿರುವ ತೋಡಿನ ಅಳತೆ ಅಳೆಯಲು ಯಂತ್ರವಿಲ್ಲ. ಪ್ರತಿವಾದಿಗಳು ಮೊದಲು ಇದ್ದ ತೋಡಿನ ಜಾಗ ಈಗ ಎಷ್ಟು ಅನುಭವಿಸುತ್ತಿದ್ದಾರೆ ಎಂದು ಹೇಳಲಾಗುವುದಿಲ್ಲ. ವಾದಿಯ ಸರ್ವೆ ನಂ. 184/2 ರಲ್ಲಿ 45ಸೆಂಟ್ ನಷ್ಟು ಜಾಗವನ್ನು ಈ ತೋಡು ಅತಿಕ್ರಮಿಸಿಕೊಂಡಿದೆ ಎಂದರೆ ಸರಿ.

ಆದ್ದರಿಂದ ಮೊದಲು ತೋಡು ಹರಿಯುತ್ತಿದ್ದ ಜಾಗ ವಾದಿಯ ಸ್ವಾದೀನಕ್ಕೆ ಬಿಟ್ಟುಕೊಡಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮೊದಲು ತೋಡು ಹರಿಯುತ್ತಿದ್ದಂತೆ ಈಗ್ಗ ಅದೇ ಜಾಗದಲ್ಲಿ ಪುನಃ ಹರಿಯುವಂತೆ ಮಾಡಲು ಆಗುತ್ತಿದೆಯೂ ಇಲ್ಲವೋ ನನಗೆ ಗೊತ್ತಿಲ್ಲ.

**ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ